



ಅಪಾರ್ಟ್ಮೆಂಟ್, ಕಮ್ಮಿ ಬಜೆಟ್‌ನ ರೂಮುಗಳು, ರಾತ್ರಿ ಮಾತ್ರ ಕಳೆಯಲು ಇರುವ ಡಾರ್ಮಿಟರಿ, ಐಶಾರಾಮಿ ಬಂಗಲೆಗಳು, ನಾನಾ ವಿಧದ ಉಳಿದುಕೊಳ್ಳುವ ವ್ಯವಸ್ಥೆ ಹೆಚ್ಚಿನ ಸ್ಥಳಗಳಲ್ಲಿ ಲಭ್ಯ. ಟ್ರೀ ಹೌಸ್, ಟೆಂಟ್ ಹೌಸ್, ಬೋಟ್ ಹೌಸ್ ಕೂಡಾ ಕೆಲವೆಡೆ ಸಿಗುತ್ತದೆ. ನಮಗೆ ಬೇಕಾದ ಆಯ್ಕೆಯನ್ನು ಮೊದಲೇ ಮಾಡಿಕೊಂಡು, ಜನ ಸಂಚಾರ ವಿರಳವಿರುವ ತಿಂಗಳನ್ನು ಆಯ್ದುಕೊಂಡರೆ ಕಡಿಮೆ ಖರ್ಚಿನಲ್ಲಿ ಉಳಿದುಕೊಳ್ಳುವ ವ್ಯವಸ್ಥೆ ಮಾಡಿಕೊಳ್ಳಬಹುದು.

'ಏರ್ ಬಿ.ಎನ್.ಬಿ' ಮುಂತಾದ ತಾಣಗಳಲ್ಲಿ ಉತ್ತಮ, ಸಕಲ ಸೌಕರ್ಯವಿರುವ ವಾಸ ಯೋಗ್ಯ ಮನೆಗಳು ದಿವಸದ ಆಧಾರದಲ್ಲಿ ಬಾಡಿಗೆಗೆ ಸಿಗುತ್ತದೆ, ಅದೂ ಸ್ಪರ್ಧಾತ್ಮಕ ದರದಲ್ಲಿ. ಹೆಚ್ಚಿನ ಪ್ರೇಕ್ಷಣೀಯ ಸ್ಥಳಗಳಲ್ಲಿ ಈ ವ್ಯವಸ್ಥೆ ಪ್ರಸಿದ್ಧಿಗೆ ಬರುತ್ತಿದೆ. ಅಷ್ಟೇ ಅಲ್ಲ, ನೀವು ಯಾವುದೇ ನೆಚ್ಚಿನ ತಾಣದಲ್ಲಿ, ಪ್ರವಾಸೋದ್ಯಮಕ್ಕೆ ಪೂರಕವಾದ ಸ್ಥಳಗಳಲ್ಲಿ ಮನೆ,ಗೆಸ್ಟ್ ಹೌಸ್ ಹೊಂದಿದ್ದಲ್ಲಿ ಅದನ್ನು ಏರ್ ಬಿ.ಎನ್.ಬಿ ತಾಣದಲ್ಲಿ ನಮೂದಿಸಿ ಉತ್ತಮ ಆದಾಯ ಕೂಡ ಗಳಿಸಬಹುದು. ಒಳ್ಳೆಯ ಸೌಲಭ್ಯ, ಪಾರ್ಕಿಂಗ್, ಸೆಕ್ಯುರಿಟಿ, ಹೌಸ್ ಕೀಪಿಂಗ್ ವ್ಯವಸ್ಥೆ ಇದ್ದರಂತೂ ತಿಂಗಳ ಹೆಚ್ಚಿನ ಅವಧಿಯಲ್ಲಿ ಪ್ರವಾಸಿಗರು ರೂಮ್ ಕಾಯ್ದಿರಿಸುವುದು ಖಂಡಿತ.

ಇನ್ನೊಂದು ಜನಪ್ರಿಯ ತಾಣ 'ಯೂಥ್ ಹಾಸ್ಟೇಲ್'. ಬ್ಯಾಕ್ ಪ್ಯಾಕ್ ಪ್ರವಾಸಿಗರಿಗೆ, ತಂಡವಾಗಿ ಚಾರಣಕ್ಕೋ, ಎಡ್ವೆಂಚರ್ ಪ್ರವಾಸಕ್ಕೋ ಹೋಗುವವರಿಗೆ ರಾತ್ರಿ ಕಳೆಯಲು ಅಗತ್ಯ ವ್ಯವಸ್ಥೆಗಳಿರುವ ರೂಮ್. ಡಾರ್ಮಿಟರಿ ಸೌಲಭ್ಯ ಇಲ್ಲಿ ದೊರೆಯುತ್ತದೆ. ಇದಕ್ಕೆ ಯೂಥ್ ಹಾಸ್ಟೇಲ್ ಸದಸ್ಯರಾಗುವುದು ಅವಶ್ಯಕ. ಅವರ ವೆಬ್ ತಾಣದಲ್ಲಿ ಈ ಬಗ್ಗೆ ಸಕಲ ಮಾಹಿತಿಯಿದೆ. ಪ್ರಪಂಚದ ಹಲವೆಡೆ ಈ ವ್ಯವಸ್ಥೆ ಪಸರಿಸಿದೆ.

ಇನ್ನು ಫೇಸ್ಬುಕ್ ಮುಂತಾದ ಸೋಶಿಯಲ್ ಮೀಡಿಯಾಗಳಲ್ಲಂತೂ ಪ್ರವಾಸ, ಚಾರಣ, ಸಂಚಾರಕ್ಕೆಂದೇ ಮೀಸಲಾದ ಹಲವಾರು ಗುಂಪುಗಳಿವೆ. ಇದಕ್ಕೊಂದು ಉದಾಹರಣೆ 'ಹೆಚ್.ವಿ.ಕೆ' ಅಥವಾ 'ಹೈವೇ ಕಿಂಗ್' ಗ್ರುಪ್. ಭಾರತದಾದ್ಯಂತ ಹಲವಾರು ಮಂದಿ ಈ ಗ್ರುಪ್‌ನಲ್ಲಿ ಸದಸ್ಯರಾಗಿದ್ದಾರೆ. ನಿಮಗೆ ಯಾವುದೇ ಸ್ಥಳಗಳ ದಾರಿಯ ಮಾಹಿತಿ ಬೇಕಿದ್ದಲ್ಲಿ, ಅಲ್ಲಿನ ಹವಾಮಾನ, ಊಟೋಪಚಾರ ಇನ್ನಿತರ ಮಾಹಿತಿ ಅಲ್ಲಿಗೆ ಪ್ರವಾಸ ಹೋಗಿಬಂದವರಿಂದಲೋ, ಅಲ್ಲಿಯೇ ವಾಸಿಸುವವರಿಂದಲೋ ಲಭ್ಯವಾಗುತ್ತದೆ, ಹಾಗೆಯೇ ನಿಮ್ಮಲ್ಲಿರುವ ಅತ್ಯಮೂಲ್ಯ ಮಾಹಿತಿಗಳನ್ನು ಇತರರೊಂದಿಗೆ ಹಂಚಿಕೊಳ್ಳಬಹುದು. ಹೆಚ್ಚಾಗಿ ಸ್ವಂತ ವಾಹನದಲ್ಲಿ ಪ್ರವಾಸ ಹೋಗುವವರು ಈ ಗುಂಪಿನ ಉಪಯೋಗ ಪಡೆಯುತ್ತಾರೆ.

ದೂರದೂರಿನ ಪ್ರಯಾಣವೆಂದರೆ ವಾರಗಟ್ಟಲೆ, ತಿಂಗಳುಗಟ್ಟಲೆ ಸಮಯ



ಬೇಕಿತ್ತು. ಈಗ ಹಾಗಿಲ್ಲ, ಬಸ್ಸು –ರೈಲು –ವಿಮಾನಯಾನದ ಸೌಲಭ್ಯ ಹಲವಾರು ಪಟ್ಟಣಗಳಿಗೆ ಇರುವುದರಿಂದ ದೂರದ ಪ್ರಯಾಣ ಸುಲಭ. ಕಮ್ಮಿ ಖರ್ಚಿನಲ್ಲೂ ಸಾಧ್ಯ. ವಿಮಾನಯಾನ ಮಧ್ಯಮ ವರ್ಗಕ್ಕಲ್ಲ ಎಂಬ ಮಾತಿತ್ತು, ಈಗ ಅದೂ ಹೆಚ್ಚಿನವರ ಕೈಗೆಟಕುವ ದರದಲ್ಲಿ ಲಭ್ಯವಾಗುತ್ತಿದೆ. ತಿಂಗಳುಗಳ ಮೊದಲೇ ಟಿಕೇಟ್ ರಿಸರ್ವೇಶನ್ ಮಾಡಿಸಿದರೆ ಏ.ಸಿ ಟ್ರೈನ್, ಬಸ್ ದರದಲ್ಲಿ ವಿಮಾನದ ಟಿಕೆಟ್ ಕೆಲವೊಮ್ಮೆ ಲಭ್ಯವಾಗುತ್ತದೆ. ಟಿಕೇಟ್ ಕಾಯ್ದಿರಿಸಲು ಹಲವಾರು ವೆಬ್/ಮೊಬೈಲ್ ತಾಣಗಳು ಆಕರ್ಷಕ ರಿಯಾಯಿತಿಯೊಂದಿಗೆ ವರ್ಷವಿಡೀ ಲಭ್ಯವಿರುತ್ತವೆ.

### ಕೆಲ ಸಲಹೆ ಸೂಚನೆಗಳು:

★ ಮಕ್ಕಳ ಜೊತೆ, ಹಿರಿಯರ ಜೊತೆ ಪ್ರವಾಸ ಹೋಗುವುದಿದ್ದಲ್ಲಿ ಒಂದೆರಡು ವಾರಗಳ ಮೊದಲೇ ಪೂರ್ವ ತಯಾರಿ ನಡೆಸುವುದು ಒಳ್ಳೆಯದು. ಕೊನೆ